# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-7407/2014/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 23/02/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀಮತಿ ಗಾಯತ್ರಿ ಜಿ. ನಾಯಕ್, ತಹಶೀಲ್ದಾರ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*-*-*

ಪ್ರಕರಣದ ದೂರುದಾರರಾದ ಶ್ರೀ ಮೋಹನ್ ಚಂದ್ರ ಇವರು ಗೌರವಾನ್ವಿತ ಲೋಕಾಯುಕ್ತರಿಗೆ ದಿನಾಂಕ 22/11/2014 ರಂದು ಉಡುಪಿ ಕ್ಯಾಂಪ್ ಸಂದರ್ಭದಲ್ಲಿ ಒಂದು ದೂರನ್ನು ಸಲ್ಲಿಸಿ ತಾನು ಪರಿಶಿಷ್ಟ ಜಾತಿಗೆ ಸೇರಿದವನಾಗಿದ್ದು, ತನಗೆ ಸರ್ಕಾರದ ವತಿಯಿಂದ ಸಾಗುವಳಿಗಾಗಿ ಜಮೀನನ್ನು ಮಂಜೂರು ಮಾಡಬೇಕೆಂದು ಕೋರಿ ಅರ್ಜಿಯನ್ನು 2 ವರ್ಷ 10 ತಿಂಗಳ ಹಿಂದೆ ನೀಡಿದ್ದು, ಈ ಬಗ್ಗೆ ಸೂಕ್ತವಾಗಿ ಪರಿಗಣಿಸಿ ಕ್ರಮ ಜರುಗಿಸಲು ಮಾನ್ಯ ಜಿಲ್ಲಾಧಿಕಾರಿಗಳು ಎದುರುದಾರರಾದ ತಹಶೀಲ್ದಾರ್‌ರವರಿಗೆ ಪತ್ರ ಬರೆದಿದ್ದರು, ಎದುರುದಾರರು 1 ವರ್ಷ ಕಳೆದರೂ ಸಹ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಆದ್ದರಿಂದ, ತನಗೆ ನ್ಯಾಯ ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಈ ಹಿನ್ನೆಲೆಯಲ್ಲಿ ಗೌರವಾನ್ವಿತ ಲೋಕಾಯುಕ್ತರು ಎದುರುದಾರರಿಗೆ ಸದರಿ ದೂರಿನ ಆಧಾರದ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಲು ತಿಳಿಸಿರುತ್ತಾರೆ. ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿ ದೂರು ಅರ್ಜಿದಾರರಾದ ಶ್ರೀ ಮೋಹನ್‌ಚಂದ್ರರವರು ದಿನಾಂಕ 12/01/2012 ರಂದು ಜಪ್ತಿ ಗ್ರಾಮದ ಸರ್ವೇ ನಂ. 264 ರಲ್ಲಿ 5.68 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯ ಕಡತ ಸಂ.ಎಲ್‌ಎನ್‌ಡಿ/ಸಿಆರ್/130/11-12 ಆಗಿದ್ದು, ಸದರಿ ಕಡತವನ್ನು ಕುಂದಾಪುರ ಕಂದಾಯ ನಿರೀಕ್ಷಕರಿಗೆ ದಿ:19/01/2012 ರಂದು ತನಿಖೆ ಮಾಡಿ ಸೂಕ್ತ ಕ್ರಮ

ಕೈಗೊಳ್ಳುವಂತೆ ರವಾನಿಸಲಾಗಿದ್ದು, ಕುಂದಾಪುರ ಕಂದಾಯ ನಿರೀಕ್ಷಕರು ಗ್ರಾಮ ಕರಣಿಕರ ಮುಖಾಂತರ ಪ್ರಕರಣದ ತನಿಖೆ ನಡೆಸಿ ದಿ:28/06/2012 ರಂದು ತಮ್ಮ ಕಛೇರಿಗೆ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಸರ್ವೆ ನಂ. 264 ಡಿಸಿ ಮನ್ನಾ ಜಮೀನಿಗೆ ಇತರ ಪರಿಶಿಷ್ಟ ಜಾತಿಯ 22 ಮಂದಿ ಜಮೀನು ಮಂಜೂರಾತಿಗೆ ಅರ್ಜಿ ಸಲ್ಲಿಸಿದ್ದು, ಶ್ರೀ ಮೋಹನಚಂದ್ರ ಇವರ ಅರ್ಜಿಯ ಕಡತದೊಂದಿಗೆ ಸದರಿ ಅರ್ಜಿಗಳನ್ನು ಜೋಡಿಸಿ ನಕಾಶೆ ತಯಾರಿಸಲು ಭೂಮಾಪಕರಿಗೆ ಕಳುಹಿಸಬಹುದಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ. ವರದಿಯಲ್ಲಿ ಕೋರಿದ್ದಂತೆ ಸ್ಥಳ ತನಿಖೆ ನಡೆಸಿ ನಕಾಶೆ, ಹೇಳಿಕೆ, ಮಹಜರ್ ಇತ್ಯಾದಿಯೊಂದಿಗೆ ಭೂಮಾಪನ ಶಾಖೆಯ ಪರ್ಯಾವೇಕ್ಷಕರಿಗೆ ಕಡತವನ್ನು ರವಾನಿಸಲಾಗಿತ್ತು. ಆದರೆ, ಸದರಿ ಪರ್ಯಾವೇಕ್ಷಕರು ಯಾವುದೇ ರೀತಿಯ ಪ್ರತ್ಯುತ್ತರವಾಗಲೀ ಪರಿಶೀಲನಾ ನಕಾಶೆಯನ್ನು ತಯಾರಿಸದೇ ತಮ್ಮ ಕಛೇರಿಗೆ ದೂರುದಾರರ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಧಿಕಾರಿಯವರು ನಿಯಮಾನುಸಾರ ಜಮೀನು ಮಂಜೂರಾತಿಗೆ ಅವಕಾಶವಿದ್ದಲ್ಲಿ ಕುಂದಾಪುರ ಸಹಾಯಕ ಆಯುಕ್ತರ ಮುಖಾಂತರ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ. ಸದರಿ ಪತ್ರವನ್ನು ಭೂಮಾಪಕರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದ್ದು, ಭೂಮಾಪಕರು ದಿ: 20/11/2014 ರಂದು ಐಆರ್/228/14-15 ರಂತೆ ವರದಿಯೊಂದಿಗೆ ಕಡತವನ್ನು ತಮ್ಮ ಕಛೇರಿಗೆ ಸಲ್ಲಿಸಿರುತ್ತಾರೆ. ತಾಲ್ಲೂಕು ಭೂಮಾಪಕರ ವರದಿಯಂತೆ ಮಾನ್ಯ ಸಹಾಯಕ ಆಯುಕ್ತರವರು ಸ್ಥಳೀಯ ನಿಮ್ನ ವರ್ಗದವರಿಗೆ ಮಂಜೂರಾತಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ ಮೇರೆಗೆ ದೂರುದಾರರ ಅರ್ಜಿಯನ್ನು ತಮ್ಮ ಕಛೇರಿಗೆ ರವಾನಿಸಿರುತ್ತಾರೆ. ಅಲ್ಲದೇ ಜಪ್ತಿ ಗ್ರಾಮದ ಸರ್ವೆ ನಂ. 264 ರಲ್ಲಿ 22 ಅರ್ಜಿಗಳು ಬಂದಿದ್ದು, ಸರ್ವೆ ನಂ. 265 ರಲ್ಲಿ 21 ಅರ್ಜಿಗಳು ಬಂದಿದ್ದು, ಭೂ ಮಂಜೂರಾತಿ ಪ್ರಕ್ರಿಯೆ ಕ್ರಮ ಜರುಗಿಸಿ ಆದೇಶ ಹೊರಡಿಸುವುದಕ್ಕೆ ಕಾಲಾವಕಾಶ ಬೇಕಾಗಿರುತ್ತದೆ. ಆದ್ದರಿಂದ, ಶೀಘ್ರದಲ್ಲೇ ಭೂ ಮಂಜೂರಾತಿ ಪ್ರಸ್ತಾವನೆಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಲಾಗುವುದೆಂದು ತಿಳಿಸಿರುತ್ತಾರೆ. ಸದರಿ ಆಕ್ಷೇಪಣೆಯ ಪ್ರತಿಯನ್ನು ಹಾಜರುಪಡಿಸಲಾಗಿದೆ.

3. ದಿ:30/01/2016 ರಂದು ಎದುರುದಾರರು ಪತ್ರ ಬರೆದು ಮಾನ್ಯ ಸಹಾಯಕ ಆಯುಕ್ತರು, ಕುಂದಾಪುರ ಇವರು ಸ್ಥಳ ತಪಾಸಣೆ ಮಾಡಿ ಸ್ಥಳೀಯರಿಗೆ ಆದ್ಯತೆಯ ಮೇರೆಗೆ ಮಂಜೂರಾತಿಯ ಬಗ್ಗೆ ಕ್ರಮ ವಹಿಸಲು ಸೂಚಿಸಿರುತ್ತಾರೆ. ಜಪ್ತಿ ಗ್ರಾಮದಲ್ಲಿ ವಾಸಿವಿರುವ ಹಲವಾರು ಪರಿಶಿಷ್ಟ ವರ್ಗದವರು ಭೂ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಜಪ್ತಿ ಗ್ರಾಮವು ಸೀಮಿತ ವಿಸ್ತೀರ್ಣವಿದ್ದು ಜಪ್ತಿ ಗ್ರಾಮದವರಿಗೆ ಆದ್ಯತೆ ನೀಡಬೇಕಾಗಿರುತ್ತದೆ. ದೂರುದಾರರು ಕಾಳಾವರ ಗ್ರಾಮದವರಾಗಿದ್ದು, ಅವರ ಅರ್ಜಿಯನ್ನು ಪರಿಗಣಿಸಲು ಅವಕಾಶವಿಲ್ಲವೆಂದು ತಿಳಿಸಿರುತ್ತಾರೆ. ಸದರಿ ಪತ್ರದ ಮೇರೆಗೆ ದೂರುದಾರರ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ಅವರು ತಮ್ಮ ಪ್ರತ್ಯುತ್ತರದಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮ 6 ರಲ್ಲಿ ಅನುಚ್ಛೇದ 3 ರಲ್ಲಿ ಅದೇ ತಾಲ್ಲೂಕಿನ ಅಥವಾ ಅದಕ್ಕೆ ಲಗತ್ತಾಗಿರುವ ತಾಲ್ಲೂಕಿನ ಇತರೆ ಗ್ರಾಮದ ಭೂ ರಹಿತ ವ್ಯಕ್ತಿಗಳು ಎಂದು ಇದ್ದು, ಅದರಂತೆ, ತಾನು ಪರಿಶಿಷ್ಟ ಜಾತಿಯವನಾಗಿದ್ದು, ಜಪ್ತಿ

ಗ್ರಾಮದ ಸರ್ವೇ ನಂ. 264 ರಲ್ಲಿ ಪರಿಶಿಷ್ಟ ಜಾತಿಯವರಿಗೆ ಮೀಸಲಿಟ್ಟ ಜಾಗವನ್ನು ತನಗೂ ಮಂಜೂರು ಮಾಡಿಕೊಡಲು ಕೋರಿರುತ್ತಾರೆ ಹಾಗೂ ಇದುವರೆಗೂ ಕುಂದಾಪುರ ತಾಲ್ಲೂಕಿನಲ್ಲಿ 850 ಎಕರೆಗಿಂತ ಹೆಚ್ಚು ಭೂಮಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಿಟ್ಟ ಭೂಮಿಯಾಗಿರುತ್ತದೆ ಎಂದು ಅದರಂತೆ ತನಗೂ ಸಹ ಭೂ ಮಂಜೂರಾತಿ ಮಾಡಿಸಿಕೊಡಬೇಕೆಂದು, ಎದುರುದಾರರು ದಲಿತ ವಿರೋದಿಯಗಿ ಇಲ್ಲಸಲ್ಲದ ಉತ್ತರವನ್ನು ನೀಡುತ್ತಿರುತ್ತಾರೆ ಎಂದು ತಿಳಿಸಿರುತ್ತಾರೆ.

4. ದೂರಿನಂಶಗಳನ್ನು ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಯನ್ನು ಎದುರುದಾರರ ಆಕ್ಷೇಪಣೆಯನ್ನು ಮತ್ತು ದೂರುದಾರರ ಪ್ರತ್ಯುತ್ತರವನ್ನು ಪರಿಶೀಲಿಸಿದಲ್ಲಿ ದೂರುದಾರರು ಪರಿಶಿಷ್ಟ ಜಾತಿಯ ಬಡ ಕುಟುಂಬದವರಿಗೆ ಸೇರಿದ್ದವರಾಗಿರುತ್ತಾರೆಂದು ಕಂಡು ಬರುತ್ತದೆ. ಉಡುಪಿಯ ಜಿಲ್ಲಾಧಿಕಾರಿಗಳು ದಿ:17/09/2013ರ ಪತ್ರದಲ್ಲಿ ದೂರುದಾರರ ಅರ್ಜಿಯನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ಅವಕಾಶವಿದ್ದಲ್ಲಿ ಮಾತ್ರ ಎಲ್ಲ ಪೂರಕ ದಾಖಲೆಗಳೊಂದಿಗೆ ಪರಿಪೂರ್ಣ ಪ್ರಸ್ತಾವನೆಯನ್ನು ವಿಳಂಭವಿಲ್ಲದೆ ಕಮೀಷನರ್ ಕುಂದಾಪುರ ಮೂಲಕ ಮಂಜೂರಾತಿ ಪ್ರಸ್ತಾವನೆಗೆ ತಮ್ಮ ಕಛೇರಿಗೆ ಸಲ್ಲಿಸುವುದು. ಮಂಜೂರಾತಿಗೆ ಅವಕಾಶವಿಲ್ಲದಿದ್ದಲ್ಲಿ ಅರ್ಜಿದಾರರಿಗೆ ಅಂತೆಯೇ ಹಿಂಬರವನ್ನು ನೀಡಿ ತಮ್ಮ ಕಛೇರಿಗೆ ಮಾಹಿತಿ ನೀಡುವಂತೆ ತಿಳಿಸಿರುತ್ತಾರೆ. ಆದರೆ, ಎದುರುದಾರರು ಮಂಜೂರಾತಿಗೆ ಅವಕಾಶವಿಲ್ಲದ ಸಂದರ್ಭದಲ್ಲಿ ಅಂತಹ ಹಿಂಬರಹವನ್ನು ದೂರುದಾರರಿಗೆ ನೀಡಬೇಕಾಗಿದ್ದು, ಅಂತಹ ಯಾವುದೇ ಕ್ರಮವನ್ನು ಎದುರುದಾರರು ಕೈಗೊಳ್ಳದೇ ಕರ್ತವ್ಯಲೋಪವೆಸಗಿರುವುದು ಕಂಡು ಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ **ಎದುರುದಾರರಾದ ಶ್ರೀಮತಿ ಗಾಯತ್ರಿ ಜಿ. ನಾಯಕ್, ತಹಶೀಲ್ದಾರ್, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ** ಇವರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡು ಬಂದಿದ್ದರಿಂದ, ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ

ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 23/2/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು. 23/2/17